ಆ) ಬಂದಿದೆ.

ಇ) ನೇಕಾರರ ಸಮಸ್ಯೆಗಳ ಪರಿಹಾರದ ಸಲುವಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಈ) ನೇಕಾರರಿಗೆ ರಾಜ್ಯ ಸರ್ಕಾರವು ಈ ಕೆಳಕಂಡ ಸೌಲಭ್ಯಗಳನ್ನು ನೀಡುತ್ತಿದೆ;

1) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯದಡಿ:–

(1) ರಾಜ್ಯ ಸರ್ಕಾರ ಶೇ. 20 ರಿಬೇಟ್ ನೀಡುತ್ತದೆ

(2) ರಾಷ್ಟ್ರೀಯ/ರಾಜ್ಯ/ಜಿಲ್ಲಾ ಮಟ್ಟದ ಕೈಮಗ್ಗ ಮೇಳ/ವಿಶೇಷ ಕೈಮಗ್ಗ ಮೇಳಗಳನ್ನು ಆಯೋಜಿಸಲಾಗುತ್ತಿದೆ.

2) ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ:–

(1) ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

(2) ಮೂಲಭೂತ ಸೌಕರ್ಯಗಳನ್ನು ನೀಡಲಾಗುತ್ತಿದೆ.

3) ವಸತಿ ಕಾರ್ಯಾಗಾರ ಸೌಲಭ್ಯ

4) ಆರೋಗ್ಯ ವಿಮಾ ಯೋಜನೆಯಡಿ ಕೈಮಗ್ಗ ನೇಕಾರರಿಗೆ ವೈದ್ಯಕೀಯ ಸೌಲಭ್ಯ

5) ಮಹಾತ್ಮಾಗಾಂಧಿ ಬುನ್ಕರ್ ಭೀಮಾ ಯೋಜನೆಯಡಿ ಸಾಮಾಜಿಕ ಭದ್ರತೆ ಸೌಲಭ್ಯ

ರೇಷ್ಮೆ ಕಾರ್ಖಾನೆ ಕೇಂದ್ರಗಳು

77(356) ಶ್ರೀ ನರೇಂದ್ರ ಬಾಬು ನ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ರೇಷ್ಮೆ ಕಾರ್ಖಾನೆ (ಗೂಡು) ಮಾರಾಟ ಕೇಂದ್ರಗಳಿವೆ (ವಿವರ ನೀಡುವುದು);

ಆ) ಈ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಕರ್ಯ ಸರ್ಕಾರ ಒದಗಿಸಿದೆಯೇ;

ಇ) ಜಿಲ್ಲೆಗಳಲ್ಲಿರುವ ಎಲ್ಲಾ ಮಾರಾಟ ಕೇಂದ್ರಗಳಲ್ಲಿ ರೇಷ್ಮೆ ಗೂಡಿನ ವ್ಯವಹಾರ ನಡೆಯುತ್ತಿದೆಯೇ;

ಈ) ಹಾಗಿದ್ದಲ್ಲಿ, ಇರುವ ಸಮಸ್ಯೆ ಮತ್ತು ಕಾರಣವನ್ನು ನೀಡುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 66 ಅಧಿಸೂಚಿತ ಸರ್ಕಾರಿ ರೇಷ್ಮೆ ಗೂಡಿನ ಮಾರು ಕಟ್ಟೆಗಳಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಎಲ್ಲಾ ಪ್ರಮುಖ ಮಾರುಕಟ್ಟೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ಗೂಡು ಶೇಖರಿಸಲು ಸ್ಥಳಾವಕಾಶ, ಕುಡಿಯುವ ನೀರು, ಶೌಚಾಲಯ, ಎಲೆಕ್ಟ್ರಾನಿಕ್ ತೂಕದ ಯಂತ್ರಗಳು, ಬಿನ್‌ಗಳು ಪ್ಲಾಸ್ಟಿಕ್ ಕ್ರೇಟುಗಳನ್ನು ಒದಗಿಸಲಾಗಿದೆ.

ಇ) ಇಲ್ಲ. ಪ್ರಸ್ತುತ 52 ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡಿನ ವಹಿವಾಟು ನಡೆಯುತ್ತಿದೆ.

ಈ) ಬಾಗಲೂರು, ದೇವನಹಳ್ಳಿ, ಬಳ್ಳಾರಿ, ಗೌರಿಬಿದನೂರು, ಕಡೂರು, ಚಿತ್ರದುರ್ಗ, ರಾಮನಾಥಪುರ, ಹಾವೇರಿ, ಕುಶಾಲನಗರ, ಬಂಗಾರಪೇಟೆ, ಮಂಡ್ಯ, ಶ್ರೀರಂಗಪಟ್ಟಣ, ನಂಜನಗೂಡು ಮತ್ತು ಲಿಂಗಸೂಗೂರು ಈ ಸ್ಥಳಗಳಲ್ಲಿ ರೇಷ್ಮೆ ಗೂಡು ಖರೀದಿಸುವ ನೂಲು ಬಿಚ್ಚಾಣಿಕೆದಾರರು ಕಡಿಮೆ ಇರುವ ಕಾರಣ ವಹಿವಾಟು ನಡೆಯುತ್ತಿಲ್ಲ.

ಅನುಬಂಧ

ಜಿಲ್ಲಾವಾರು ರೇಷ್ಮೆ ಗೂಡಿನ ಮಾರುಕಟ್ಟೆಗಳ ವಿವರ

ಕ್ರ ಸಂ.	ಜಿಲ್ಲೆ	ಮಾರುಕಟ್ಟೆಗಳು		
		ಮಿಶ್ರತಳಿ	ದ್ವಿತಳಿ ಬಿತ್ತನೆ	ಮೈಸೂರು ತಳಿ ಬಿತ್ತನೆ
1	2	3	4	5
1	ಬೆಂಗಳೂರು ನಗರ	1. ಬಾಗಲೂರು*	2. ಬೆಂಗಳೂರು 3. ಅತ್ತಿಬೆಲೆ 4. ಸರ್ಜಾಪುರ	

1	2	3	4	5
2	ಬೆಂಗಳೂರು ಗ್ರಾಮಾಂತರ	5. ವಿಜಯಪುರ 6. ದೇವನಹಳ್ಳಿ*		
3	ಬಾಗಲಕೋಟೆ	7. ಮುಧೋಳ 8. ಇಳಕಲ್		
4	ಬೆಳಗಾವಿ	9. ಅಥಣಿ 11. ಗೋಕಾಕ್	10. ಬೆಳಗಾವಿ	
5	ಬಳ್ಳಾರಿ	12. ಬಳ್ಳಾರಿ* 13. ಕೂಡ್ಲಿಗಿ		
6	ಬೀದರ್	14. ಹುಮ್ನಾಬಾದ್		
7	ಬಿಜಾಪುರ	15. ಬಿಜಾಪುರ		
8	ಚಾಮರಾಜನಗರ	16. ಚಾಮರಾಜನಗರ 17. ಸಂತೇಮರನಹಳ್ಳಿ 18. ಹರವೆ 19. ಕೊಳ್ಳೇಗಾಲ 20. ಹನೂರು		
9	ಚಿಕ್ಕಬಳ್ಳಾಪುರ	21. ಚಿಕ್ಕಬಳ್ಳಾಪುರ 22. ಚಿಂತಾಮಣಿ 23. ಹೆಚ್. ಕ್ರಾಸ್ 24. ಶಿಡ್ಲಘಟ್ಟ 25. ಗೌರಿಬಿದನೂರು*		
10	ಚಿಕ್ಕಮಗಳೂರು	26. ಕಡೂರು*		
11	ಚಿತ್ರದುರ್ಗ	27. ಚಿತ್ರದುರ್ಗ*		
12	ದಕ್ಷಿಣ ಕನ್ನಡ	28. ಬಿ.ಸಿ. ರೋಡ್		
13	ದಾವಣಗೆರೆ	29. ದಾವಣಗೆರೆ		
14	ಧಾರವಾಡ	30. ರಾಯಾಪುರ		

1	2	3	4	5
15	ಗದಗ	31. ಶಿರಹಟ್ಟಿ		
16	ಗುಲ್ಬರ್ಗಾ	32. ಗುಲ್ಬರ್ಗಾ 33. ಜೇವರ್ಗಿ		
17	ಹಾಸನ	34. ರಾಮನಾಥ ಪುರ*	35. ಹಾಸನ	
18	ಹಾವೇರಿ	36. ಹಾವೇರಿ*		
19	ಕೊಡಗು		37. ಕುಶಾಲನಗರ	
20	ಕೋಲಾರ	38. ಕೋಲಾರ 39. ಕ್ಯಾಲನೂರು 40. ಶ್ರೀನಿವಾಸ ಪುರ 41. ಮುಳಬಾಗಿಲು 42. ಬಂಗಾರ ಪೇಟೆ*		
21	ಮಂಡ್ಯ	43. ಮಂಡ್ಯ* 45. ಮಳವಳ್ಳಿ 46. ಶ್ರೀರಂಗ ಪಟ್ಟಣ*	44. ಕೆ.ಆರ್. ಪೇಟೆ	
22	ಮೈಸೂರು	47. ನಂಜನಗೂಡು 48. ಹುಣಸೂರು 49. ಟಿ. ನರಸೀ ಪುರ		
23	ರಾಮನಗರ	50. ರಾಮನಗರ 52. ಚನ್ನಪಟ್ಟಣ 54. ಕನಕಪುರ		51. ಮಾಗಡಿ 53. ಕುದೂರು 55. ಸೋಲೂರು 56. ವೀರೇ ಗೌಡನದೊಡ್ಡಿ
24	ರಾಯಚೂರು	57. ಲಿಂಗ ಸೂಗೂರು*		
25	ಶಿವಮೊಗ್ಗ	58. ಶಿವಮೊಗ್ಗ		
26	ತುಮಕೂರು		59. ತುಮಕೂರು	60. ಹೆಬ್ಬೂರು

1	2	3	4	5
				61. ಕುಣಿಗಲ್ 62. ಸಂತೇ ಮಾವತ್ತೂರು 63. ಕೆಂಪನ ಹಳ್ಳಿ 64. ಹುಲಿಯೂರುದುರ್ಗ 65. ಚೌಡನ ಕುಪ್ಪೆ
27	ಉತ್ತರ ಕನ್ನಡ		66. ಶಿರಸಿ	

(*ವಹಿವಾಟು ನಡೆಯುತ್ತಿಲ್ಲ)

ಉಡುಪಿ, ಕೊಪ್ಪಳ ಮತ್ತು ಯಾದಗೀರ್ ಜಿಲ್ಲೆಗಳಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆಗಳು ಇರುವುದಿಲ್ಲ.

ಕೆ.ಐ.ಎ.ಡಿ.ಬಿ. ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಿರುವುದು

78(357) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಎಷ್ಟು ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಲಾಗಿದೆ;

ಆ) ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡುವಾಗ ಬಡಾವಣೆಯ ಅವಶ್ಯಕತೆಗೆ ಬೇಕಾಗುವ ಬಸ್ ಸೌಲಭ್ಯ ಹಾಗೂ ಸಾರ್ವಜನಿಕ ಸೌಲಭ್ಯಗಳು ಕಲ್ಪಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಸದರಿ ಉದ್ದೇಶಗಳಿಗಾಗಿ ಕಾಯ್ದಿರಿಸಿರುವ ಸ್ಥಳಗಳು ಮತ್ತು ವಿಸ್ತೀರ್ಣ ಎಷ್ಟು (ವಿವರ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಯಾವುದೇ ಕೈಗಾರಿಕಾ ಶೆಡ್‌ಗಳನ್ನು ನಿರ್ಮಿಸಿರುವುದಿಲ್ಲ. ಹಾಗೂ ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.